ದಿ:**03.08.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು:-ಪ್ರತಿವಾದಿ ಪರ ಶ್ರೀ.T.M.S., ವಕೀಲರಿಂದ:-

ದಾವಾಸ್ವತ್ತಿನ ಉತ್ತರ ದಿಕ್ಕಿಗೆ ನನಗೆ ಸೇರಿದ 27/5 ಜಮೀನು ಇರುತ್ತದೆ. ದಾವಾ ಆಸ್ತಿ ಐಟಂ ನಂ:1 ರ ಪಕ್ಕ ನನ್ನ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ11 ವಿಲ್ ನ್ನು ರಚಿಸಲು ತಿಪ್ಪೆರುದ್ರಪ್ಪರವರು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಯಾವ ದಿನಾಂಕ ನಿಖರವಾಗಿ ಗೊತ್ತಿರುವುದಿಲ್ಲ ಸಾಕ್ಷಿ ಮುಂದುವರಿದು ಸುಮಾರು 4-5 ವರ್ಷಗಳು ಆಗಿರುತ್ತವೆ ಎಂದು ಹೇಳುತ್ತಾರೆ. ನಿಪಿ11 ವಿಲ್ ನ್ನು ಪರಮೇಶ್ವರಪ್ಪ ಎಂಬುವವರು ತಯಾರಿಸಿರುತ್ತಾರೆ. ತಿಪ್ಪೆರುದ್ರಪ್ಪರವರಿಗೆ ನಿಪಿ11 ವಿಲ್ ರಚಿಸಿದ ಕಾಲಕ್ಕೆ 86 ವರ್ಷ ಆಗಿರುತ್ತದೆ ಎಂದರೆ ಸರಿ. ತಿಪ್ಪೆರುದ್ರಪ್ಪರವರಿಗೆ ಆರೋಗ್ಯ ಸ್ಥಿತಿ ಸರಿಯಿರುವುದಿಲ್ಲ ಹಾಗೂ ಅವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ತಿಪ್ಪೆರುದ್ರಪ್ಪರವರು ಬಸ್ ಮೂಲಕ ಜಗಳೂರಿಗೆ ಬಂದಿರುತ್ತೇವೆ. ಸಾಕ್ಷಿ ಮುಂದುವರಿದು ನಾನು, ತಿಪ್ಪೆರುದ್ರಪ್ಪ ಮತ್ತು ಭೀಮಪ್ಪರವರು ಬಂದಿರುತ್ತೇವೆ ಎಂದು ಹೇಳುತ್ತಾರೆ. ಭೀಮಪ್ಪರವರನ್ನು ಸಹ ತಿಪ್ಪೆರುದ್ರಪ್ಪರವರು ಕರೆದುಕೊಂಡು ಬಂದಿರುತ್ತಾರೆ. ತಿಪ್ಪೆರುದ್ರಪ್ಪರವರು ಈ ಸುಮಾರು 4-5 ವರ್ಷ ವಿಲ್ ತಯಾರಿಸಿದ 2 ವರ್ಷಗಳ ನಂತರ ಮರಣ ಹೊಂದಿರುತ್ತಾರೆ. ತಿಪ್ಪೆರುದ್ರಪ್ಪರವರಿಗೆ ದಾವಾ ಆಸ್ತಿ ಬಿಟ್ಟು ಗ್ರಾಮದಲ್ಲಿ ನಿವೇಶನ ಇರುತ್ತದೆ. ನಾನು ತಿಪ್ಪೆರುದ್ರಪ್ಪರವರ ಮನೆಯಲ್ಲಿ ವಾಸಮಾಡಿಕೊಂಡಿರುತ್ತೇನೆ. ಸದರಿ ನಾನು ವಾಸ ಇರುವ ತಿಪ್ಪೆರುದ್ರಪ್ಪರವರ ಮನೆಯ ಖಾತೆ ನಂಬರು ಗೊತ್ತಿರುವುದಿಲ್ಲ. ನಿಪಿ11 ವಿಲ್‌ಗೆ ನೊಂದಣಿ ಶುಲ್ಕವು ವಾದಿ ಭಾಗ್ಯಮ್ಮರವರು ಭರಿಸಿರುತ್ತಾರೆ. ನಿಪಿ11 ವಿಲ್ ನ್ನು ಸಂಪೂರ್ಣವಾಗಿ ವಾದಿ ಭಾಗ್ಯಮ್ಮರವರೇ ತಯಾರಿಸಿರುತ್ತಾರೆ ಎಂದರೆ ಸಾಕ್ಷಿ ಪರಮೇಶ್ವರಪ್ಪರವರು ತಯಾರಿಸಿರುತ್ತಾರೆ ಎಂದು ಹೇಳುತ್ತಾರೆ. ನಿಪಿ11 ವಿಲ್‌ನಲ್ಲಿ ತಿಪ್ಪೆರುದ್ರಪ್ಪರವರು ಕೇವಲ ಸರ್ವೆ ನಂ:29 ಜಮೀನು ಮಾತ್ರ ಮಾಡಿಕೊಟ್ಟಿರುತ್ತಾರೆ. ನಿಪಿ11 ವಿಲ್ ನಲ್ಲಿ ಸರ್ವೆ ನಂ:29 ರ ವಿಸ್ತೀರ್ಣ ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ನಾನು ಕೇವಲ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಾನು ವಾಸವಿರುವ ತಿಪ್ಪೆರುದ್ರಪ್ಪರವರ ಮನೆಯನ್ನು ಪ್ರತಿವಾದಿಗೆ

ನನಗೆ ಬರೆಸಿಕೊಡಲು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನಗೆ ಮನೆಯನ್ನು ಬರೆದುಕೊಡದೇ ಇರುವ ಕಾರಣಕ್ಕಾಗಿ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಪ್ಪೇರುದ್ರಪ್ಪರವರು ಅನಾರೋಗ್ಯದಿಂದ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಜಗಳೂರು